# ಪ್ರೇಮವೆಂಬ ಆಮ್ಲಜನಕ



ಆಮ್ಲಜನಕದ ಸಿಲಿಂಡರ್‌ಗಳಿಗಾಗಿ ಪಾಳಿ ಹಚ್ಚಿರುವ ಜನ

**ಫೆಬ್ರುವರಿ 14 'ವ್ಯಾಲೆಂಟೈನ್ಸ್ ಡೇ'. ಪ್ರೇಮಿಗಳ ಸಂಭ್ರಮದ ಈ ದಿನದ ಹೊಳಪು ಪ್ರಸಕ್ತ ವರ್ಷ ಕೊಂಚ ಕಳೆಗುಂದಿದೆ. ಕೊರೊನಾದ ಛಾಯೆ 'ಪ್ರೇಮಿಗಳ ದಿನ'ದ ಮೇಲೂ ಬೀರಿದೆ. ಈ ದಿನಗಳ ಪ್ರೇಮ ನಮ್ಮಲ್ಲಿ ಹುಟ್ಟಿಸಬೇಕಿರುವುದು ಉನ್ಮಾದವನ್ನಲ್ಲ; ಎಲ್ಲರೂ ನಮ್ಮವರೆನ್ನುವ ಜೀವನಪ್ರೀತಿಯನ್ನು.**

**■ ಮಹತಿ**

ನಾನು ಬಡವಿ ಆತ ಬಡವ ಒಲವೆ ನಮ್ಮ ಬದುಕು ಬಳಸಿಕೊಂಡೆವದನೆ ನಾವು ಅದಕು ಇದಕು ಎದಕು.

ಪ್ರೇಮವನ್ನು ಬದುಕಿನ ಎಲ್ಲ ಸಂಗತಿಗಳಿಗೂ 'ಅದಕು ಇದಕು ಎದಕು'– ಬಳಸಿಕೊಂಡೆವು ಎನ್ನುತ್ತಾರೆ ಕವಿ ದ.ರಾ. ಬೇಂದ್ರೆ. ಕವಿಯ ಪಾಲಿಗೆ ಪ್ರೇಮವೇ ಬದುಕಿನ ಸಾರಸರ್ವಸ್ವ ಆಗಿರಬಹುದು. ಏಕೆಂದರೆ ಅವರು 'ವರಕವಿ'. ಜನಸಾಮಾನ್ಯರ ಪಾಡೇನು? ಬೇರೆ ದಾರಿಯಿಲ್ಲ, ಶ್ರೀಸಾಮಾನ್ಯ ಕೂಡ ಪ್ರೇಮವನ್ನು ರಮಣೀಯವಾಗಿ ನೋಡುವುದು ಬಿಟ್ಟು ಬದುಕಿನ ಜೀವದ್ರವ್ಯವಾಗಿ ನೋಡಬೇಕಾದ ಸಂದರ್ಭ ಇಂದಿನದು. ಕೊರೊನಾ ನಮ್ಮ ಬದುಕನ್ನಷ್ಟೇ ಬದಲಿಸಿಲ್ಲ; ಪ್ರೇಮದ ಪರಿಕಲ್ಪನೆಗಳನ್ನೂ ಬದಲಿಸಿದೆ.

ಬದುಕಿನ ನಶ್ವರತೆ ಮನುಕುಲದ ಇತಿಹಾಸದುದ್ದಕ್ಕೂ ಬೇರೆ ಬೇರೆ ರೂಪಗಳಲ್ಲಿ ನಮಗೆದುರಾಗಿದೆ. ಆದರೆ, ಅದು ನೇರವಾಗಿ ಅನುಭವಕ್ಕೆ ತಾಕಿದ್ದು ಕೊರೊನಾ ಸಂದರ್ಭದಲ್ಲಿ. ನಮ್ಮ ಕಣ್ಣಮುಂದೆಯೇ ಸಾವು ಸಂಭವಿಸಿದಾಗ, ಪ್ರೀತಿಪಾತ್ರರನ್ನು ಸಾವಿನಮನೆಗೆ ಏಕಾಂಗಿಯಾಗಿ ಬೀಳ್ಕೊಡುವಾಗ ಅನುಭವಿಸಿದ ಭಾವಗಳನ್ನು ಹೇಗೆ ಬಣ್ಣಿಸುವುದು? ಆ ವೇದನೆಗೆ ಯಾವ ರೂಪಕ ಸಮರ್ಥವಾಗಿ ಒದಗಿಬಂದೀತು? ಬಹುಶಃ, ಮನುಕುಲ ಕಂಡ ಬಹುದೊಡ್ಡ ಗುರು ಕೊರೊನಾ ವೈರಾಣುವೇ ಇರಬೇಕು.

ಬದುಕಿನ ನಶ್ವರತೆಯನ್ನು ಕಾಣಿಸಿದ ಗುರುವೇ, ಬದುಕಿನ ಘನತೆಯನ್ನೂ ಮನದಟ್ಟು ಮಾಡಿಸಿದ್ದಾನೆ. ಸಣ್ಣತನಗಳನ್ನು ನೀಗಿಕೊಂಡು ಇರುವಷ್ಟು ದಿನ ಬದುಕಿನ ಚೆಲುವನ್ನು ಹೆಚ್ಚಿಸಿಕೊಳ್ಳುವ ಅಗತ್ಯವನ್ನೂ ಕಾಣಿಸಿದ್ದಾನೆ. ಈ ಸತ್ಯ ಇನ್ನಷ್ಟು ಮನದಟ್ಟಾಗಬೇಕಾದರೆ, ಜಗತ್ತಿನ ಬೇರೆ ಬೇರೆ ಭಾಗಗಳಲ್ಲಿ ಇನ್ನೂ ಉಳಿದಿರುವ ಕೊರೊನಾ ಪರಿಣಾಮದ ಚಿತ್ರಗಳನ್ನು ಗಮನಿಸಬೇಕು.

ದಕ್ಷಿಣ ಅಮೆರಿಕದ ಪೆರುವಿನ ಚಿತ್ರಣವನ್ನು ನೋಡಿ. ಅಮೆಜಾನ್ ಮಳೆಕಾಡುಗಳ ಕರುಣೆಗೊಳಗಾದ ಈ ಪ್ರದೇಶ ಕೊರೊನಾದ ಕ್ರೂರದೃಷ್ಟಿಯಿಂದಲೂ ಬಾಧೆಗೊಳಗಾಗಿದೆ. ಈ ಟಿಪ್ಪಣಿಯೊಂದಿಗಿರುವ ಆಮ್ಲಜನಕದ ಸಿಲಿಂಡರ್‌ಗಳನ್ನು ಗಮನಿಸಿ. 'ಕೋವಿಡ್ 19'ರ ಸೋಂಕಿಗೊಳಗಾದ ತಮ್ಮ ಬಂಧುಮಿತ್ರರನ್ನು ಜೀವಂತವಾಗಿ ಉಳಿಸಿಕೊಳ್ಳುವ ಉದ್ದೇಶದಿಂದ ಆಮ್ಲಜನಕವನ್ನು ತುಂಬಿಸಿಕೊಳ್ಳಲು ಜನ ಸರತಿಯಲ್ಲಿ ಕಾಯುತ್ತಿದ್ದಾರೆ. ನಮ್ಮಲ್ಲಿ ಪ್ರತಿಷ್ಠಿತ ಖಾಸಗಿ ಶಾಲೆಗಳಿಗೆ ಮಕ್ಕಳನ್ನು ಸೇರಿಸುವ ಹಂಬಲದಿಂದ, ರಾತ್ರಿಯೆಲ್ಲ ಶಾಲೆಯ ಮುಂದೆ ಪೋಷಕರು ಪಾಳಿ ಹಚ್ಚುತ್ತಿದ್ದರಲ್ಲ; ಅದೇರೀತಿ, ಖಾಲಿಯಾದ ಆಮ್ಲಜನಕದ ಸಿಲಿಂಡರ್‌ಗಳನ್ನು ಭರ್ತಿ ಮಾಡಿಸಿಕೊಳ್ಳಲು ಪೆರುವಿನಲ್ಲಿ ಜನರ ಸಾಲು ಕಾಣಿಸುತ್ತಿದೆ. ಕಟ್ಟಿಕೊಂಡಿರುವ ಉಸಿರು ಯಾವ ಕ್ಷಣದಲ್ಲಾದರೂ ಬಿಡುಗಡೆಗೊಳ್ಳುವಂತೆ ಸಾಲಾಗಿ ನಿಂತಿರುವ ಆಮ್ಲಜನಕದ ಸಿಲಿಂಡರ್‌ಗಳು ಕಾಣಿಸುತ್ತವೆ.

ಆಮ್ಲಜನಕದ ಕೊರತೆಯಿಂದ ಜನ



ಒಂದೆಡೆ ಉಸಿರು ತುಂಬಿಕೊಳ್ಳಲು ಕಾಯುತ್ತಿರುವ ಸಿಲಿಂಡರ್‌ಗಳು, ಇನ್ನೊಂದೆಡೆ ಉಸಿರು ಉಳಿಸಿಕೊಳ್ಳಲು ಹಂಬಲಿಸುತ್ತಿರುವ ಜೀವಿಗಳು